

ದಂಪತಿಗಳು ಪ್ರೀತಿ ಆತ್ಮೀಯತೆಯಿಂದ ಬದುಕುತ್ತಿದ್ದರು ಎಂದು ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಅಹಿತಕರ ಸಂಬಂಧಗಳಲ್ಲಿಯೂ ಅನಿವಾರ್ಯವಾಗಿ ಸಂಗಾತಿಗಳು ಒಂದು ಮಟ್ಟದ ಹೊಂದಾಣಿಕೆ (ವರ್ಕಿಂಗ್ ರಿಲೇಷನ್‌ಶಿಪ್) ರೂಪಿಸಿಕೊಳ್ಳುತ್ತಿದ್ದರು.

ಇವತ್ತು ಪೂರ್ಣ ಧಾರ್ಮಿಕ ವಿಧಿವಿಧಾನಗಳಲ್ಲಿ ಮದುವೆಯಾದವರೂ ವಿಚ್ಛೇದನ ಅನಿವಾರ್ಯವಾದಾಗ ಧಾರ್ಮಿಕ ನಂಬಿಕೆಗಳನ್ನು ದೂರ ತಳ್ಳುತ್ತಾರೆ. ಪಟ್ಟಣಗಳಲ್ಲಿ ಬದುಕುತ್ತಿರುವವರಿಗೆ ಸಾಮಾಜಿಕ ಕಳಂಕ ಅಷ್ಟಾಗಿ ಕಾಡುವುದಿಲ್ಲ. ಪ್ರೀತಿ ಪ್ರೇಮ, ಕುಟುಂಬ ಜೀವನಕ್ಕಾಗಿ ತ್ಯಾಗ ಹೊಂದಾಣಿಕೆ, ಕುಂಕುಮ ಭಾಗ್ಯ, ತಾಳಿ ಭಾಗ್ಯ ಮುಂತಾದ ಆದರ್ಶಗಳು ಟೀವಿ ಧಾರವಾಹಿಗಳಿಗೆ ಸೀಮಿತಗೊಂಡಿವೆ! ಅಂದರೆ ವೈವಾಹಿಕ ವ್ಯವಸ್ಥೆಯ ತಳಹದಿಗಳು ಎಂದು ನಾವೆಲ್ಲಾ ಅಂದುಕೊಂಡಿದ್ದ ಅಂಶಗಳು 21ನೇ ಶತಮಾನದಲ್ಲಿ ಅಪ್ರಸ್ತುತವಾಗಿದೆ ಅನಿಸುವುದಿಲ್ಲವೇ? ಹಾಗಿದ್ದರೂ ನಮ್ಮ ಪೋಷಕರು ಮತ್ತು ಸಮಾಜ ವಿಜ್ಞಾನಿಗಳು ವೈವಾಹಿಕ ವ್ಯವಸ್ಥೆಗೆ ಹೊಸ ಮಾದರಿಯ ಬುನಾದಿಯನ್ನು ಹಾಕುವ ಬಗೆಗೆ ಯೋಚಿಸದೆ ಕಳೆದುಕೊಂಡಿರುವುದಕ್ಕೆ ಇನ್ನೂ ಏಕೆ ಕರುಬುತ್ತಿದ್ದಾರೆ? ಇವತ್ತಿನ ತಲೆಮಾರಿನವರ ಮದುವೆಗಳಿಗೆ ಹೊಸ ನೆಲೆಗಟ್ಟನ್ನು ಕಟ್ಟುವುದಾದರೂ ಹೇಗೆ?

## ಸರಳವಾಗಿ ಯೋಚಿಸೋಣ

ಕುಲ, ಧರ್ಮ, ಗೋತ್ರ, ಜಾತಿ, ಜಾತಕ ಎಲ್ಲವನ್ನೂ ಹೊಂದಾಣಿಕೆ ಮಾಡಿ ಧಾರ್ಮಿಕ ಸಂಪ್ರದಾಯಗಳನ್ನು ಚಾಚೂ ತಪ್ಪದೆ ಆಚರಿಸಿ ಆದ ಮದುವೆಗಳನ್ನೂ ನ್ಯಾಯಾಲಯಗಳು ರದ್ದುಗೊಳಿಸುತ್ತವೆ. ಅಂದರೆ